ದಿನಾಂಕ : 07.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿಯ ಪರವಾಗಿ ಶ್ರೀ ಆರ್.ವಿ.ಆರ್ ವಕೀಲರಿಂದ ಃ**

*ಈ ದಾವೆಯನ್ನು ಯಾರು ಯಾರ ವಿರುದ್ಧ ಮತ್ತು ಯಾವ ಕಾರಣಕ್ಕೆ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತು. ಈ ದಾವೆಯನ್ನು ಭಾಗ ಕೋರಿ ಸಲ್ಲಿಸಿದ್ದಾರೆ. ವಾದಿಯವರ ತಂದೆ ನನಗೆ ಗೊತ್ತು. ಅದೇ ರೀತಿ ವಾದಿ ಮತ್ತು ಪ್ರತಿವಾದಿಯ ಕುಟುಂಬದ ಬಗ್ಗೆ ನನಗೆ ಪರಿಚಯವಿದೆ. ಈ ದಾವಾ ಆಸ್ತಿಯನ್ನು ಹೊರತು ಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ಇರುವ ಬೇರೆ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಬೇರೆ ಆಸ್ತಿಗಳ ಬಗ್ಗೆ ನನಗೆ ತಿಳಿದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾ ಆಸ್ತಿಯು ಪ್ರತಿವಾದಿಯ ಹೆಸರಿನಲ್ಲಿ ಇದೆ . ಅದು ಅವರ ಹೆಸರಿಗೆ ಪವತಿವಾರಸು ಮೂಲಕ ಬಂದಿದೆ . ಆ ಬಗ್ಗೆ ನಾನು ದಾಖಲಾತಿ ನೋಡಿಲ್ಲ . ದಾಖಲಾತಿ ನೋಡಿಲ್ಲ, ಹಾಗಾದರೆ ಪವತಿವಾರಸು ಮೂಲಕ ಖಾತೆ ಆದ ಬಗ್ಗೆ ನಿಮಗೆ ಹೇಗೆ ತಿಳಿಯಿತು ಎಂದರೆ ಸಾಕ್ಷಿಯು ಒಂದೇ ಊರಿನವರು ಎಂದು ಹೇಳುತ್ತಾರೆ. ನನಗೆ ಅದೇ ಊರಿನಲ್ಲಿ **2** ಎಕರೆ ಆಸ್ತಿ ಇದೆ. ನನ್ನ ಜಮೀನಿನ ಪಕ್ಕ ಇರುವ ಇತರರ ಆಸ್ತಿಯ ಬಗ್ಗೆ ನನಗೆ ಗೊತ್ತಿಲ್ಲ. ಯಾರ ಯಾರ ಜಮೀನಿನ ಪಕ್ಕ ಯಾರ ಜಮೀನು ಬರುತ್ತದೆ ಮತ್ತು ಅದು ಅವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ . ಪ್ರತಿವಾದಿಯವರು ಈಗ ಬೆಂಗಳೂರಿನಲ್ಲಿ ವಾಸವಿದ್ದಾರೆ. ಅದಕ್ಕೂ ಮೊದಲು ಊರಿನಲ್ಲಿ ವಾಸವಿದ್ದರು . ಅವರು ಬೆಂಗಳೂರಿಗೆ ಏಕೆ ಹೋಗಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿಯ ಮಕ್ಕಳಿಗೆ ಬೆಂಗಳೂರಿನಲ್ಲಿ ಕೆಲಸ ಸಿಕ್ಕಿದ ಕಾರಣ ಅವರು ಅಲ್ಲಿಗೆ ಹೋಗಿರುತ್ತಾರೆ ಎಂದರೆ ಸರಿ . ಅದಕ್ಕೂ ಮೊದಲು ಊರಿನಲ್ಲಿ ಇದ್ದಾಗ ಪ್ರತಿವಾದಿಯ ಭಾಗಕ್ಕೆ ಬಂದ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು. ಪ್ರತಿವಾದಿಯು ಬೆಂಗಳೂರಿಗೆ ಹೋದಾಗ ವಾದಿಯವರು ನಿಮ್ಮ ಜಮೀನನ್ನು ನೋಡಿಕೊಳ್ಳುತ್ತೇನೆ ಎಂದು ಪ್ರತಿವಾದಿಗೆ ಹೇಳಿ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ . ದಾವಾ ಆಸ್ತಿಯಲ್ಲಿ ಮಾವಿನ ತೋಟ ಮತ್ತು ಮನೆ ಇರುತ್ತದೆ. ವಾದಿಯು ಆ ಮನೆಯಲ್ಲಿ ಇದ್ದಾರೆ. ಪ್ರತಿವಾದಿ ಜಮೀನಿನ ನೋಡಿಕೊಳ್ಳುತ್ತಿರುವುದರಿಂದ ವಾ ದಿ ಯವರು ಸದರಿ ಮನೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಇಲ್ಲ, ಅವರ ಮನೆಯಲ್ಲಿ ಅವರು ಇದ್ದಾರೆ ಎಂದು ಹೇಳುತ್ತಾರೆ . ದಾವಾ ಆಸ್ತಿಯ ಸರ್ವೆ ನಂ: **18** ಮತ್ತು*

*ವಿಸ್ತೀರ್ಣ 2 ಎಕರೆ 31 ಗುಂಟೆ. ಅದನ್ನು ಹೊರತು ಪಡಿಸಿ ಬೇರೆ ಆಸ್ತಿ ಇರಬಹುದು , ಆದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಪ್ರತಿವಾದಿಯವರ ತಂದೆಯ ಆಸ್ತಿಯಾಗಿದ್ದು , ಪ್ರತಿವಾದಿಯ ಪಾಲಿಗೆ ಬಂದ ಕಾರಣ ಅವರು ಸದರಿ ಜಮೀನಿನಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅವರವರ ಭಾಗಕ್ಕೆ ಬಂದ ಆಸ್ತಿಯಲ್ಲಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಮತ್ತು ವಾದಿಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಮತ್ತು ವಾದಿ ಒಂದೇ ಊರಿನವರು ಹಾಗೂ ಅಲ್ಲಿಯೇ ವಾಸವಿದ್ದೇವೆ ಎಂದರೆ ಸರಿ . ಅವರ ಮಾತುಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಈ ಆಸ್ತಿಯ ವಿಚಾರ ನನಗೆ ಏನೂ ತಿಳಿಯದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.*

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು).**

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು *ಬಿ.ಕೆ.*)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ